ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಗ್ರಾಅಪ:483:ಉಖಾಯೋ:2017 ಬೆಂಗಳೂರು ದಿನಾಂಕ:21.02.2018

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಓಂಬುಡ್ಸ್‌ಮನ್‌ಗಳ ನೇಮಕಾತಿ–2018

****

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005ರ ಪ್ರಕರಣ 27ರ ಉಪಪ್ರಕರಣ(1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭಾರತ ಸರ್ಕಾರವು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ವೀಕರಿಸಲಾಗುವ ದೂರುಗಳನ್ನು ಪರಿಶೀಲಿಸಿ ವಿಲೇಗೊಳಿಸಲು ಜಿಲ್ಲೆಗಳಿಗೆ ಓಂಬುಡ್ಸ್‌ಮನ್‌ಗಳನ್ನು ನೇಮಿಸಲು ಮಾರ್ಗಸೂಚಿಗಳನ್ನು ಹೊರಡಿಸಿದ್ದು (ದಿನಾಂಕ:28.08.2017 ರ ಪತ್ರದಲ್ಲಿ ಪರಿಷ್ಕರಿಸಿರುವಂತೆ) ಅದರನ್ವಯ ಓಂಬುಡ್ಸ್‌ಮನ್‌ಗಳ ನೇಮಕಾತಿಗಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ. ಓಂಬುಡ್ಸ್‌ಮನ್‌ಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿದ್ದು, ಸ್ವೀಕರಿಸಲಾದ ಅರ್ಜಿಗಳನ್ನು ದಿನಾಂಕ:12.02.2018 ರಂದು ಜರುಗಿದ ಆಯ್ಕೆ ಸಮಿತಿಯ ಮುಂದೆ ಮಂಡಿಸಲಾಗಿದ್ದು, ಸಮಿತಿಯು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಗಳನ್ವಯ ಈ ಕೆಳಕಂಡ ಅಭ್ಯರ್ಥಿಗಳನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಿದ್ದು, ಈ ಸಂಬಂಧ ಸಾರ್ವಜನಿಕರಿಂದ ಪ್ರತಿಕ್ರಿಯೆ/ಆಕ್ಷೇಪಣೆಗಳನ್ನು ಆಹ್ವಾನಿಸಿ ಸ್ವೀಕೃತವಾಗುವ ಪ್ರತಿಕ್ರಿಯೆ/ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ತೀರ್ಮಾನಿಸಲಾಗಿರುತ್ತದೆ. ಜಿಲ್ಲೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯು, ಕಾಯ್ದಿರಿಸಿದ ಆಯ್ಕೆ ಪಟ್ಟಿ 1 ಮತ್ತು 2 ರೊಂದಿಗೆ ವಿವರಗಳು ಈ ಕೆಳಗಿನಂತಿವೆ.

| ಕ್ರ.ಸಂ | ಜಿಲ್ಲೆ | ತಾತ್ಕಲಿಕ ಆಯ್ಕೆ ಪಟ್ಟಿಯ ಅಭ್ಯರ್ಥಿಗಳು ಶ್ರೀಯುತರು | ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿ –1ರ ಅಭ್ಯರ್ಥಿಗಳು ಶ್ರೀಯುತರು | ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿ –2ರ ಅಭ್ಯರ್ಥಿಗಳು ಶ್ರೀಯುತರು |
|---|---|---|---|---|
| 1 | ಬೀದರ್ | ಶಿದರಾಯ ಎಂ.ಕೆಂಚಣ್ಣವರ, ಅಲಮೇಲಕರ ಕಾಂಪೌಂಡ್, ರಡ್ಡಿ ಕಾಲೋನಿ ಎದುರು, ಸರಸ್ವತಪುರ, ಧಾರವಾಡ–580002 | ಶಿವಾಜಿ ದತ್ತಾರಾವ್ ತಾಂಬ್ರೆ, ಪ್ಲಾಟ್ ನಂ.22, ಗೋದಾವರಿ ಕಾಲೋನಿ, ಹಿಮಾಲಯ ಕಾನ್ವೆಂಟ್ ಸ್ಕೂಲ್ ಹಿಂಬಾಗ, ಬಾಲ್ಕಿ ರೋಡ್, ನೌಬಾದ್, ಬೀದರ್–585402 | ಶಿವಯ್ಯ ಸ್ವಾಮಿ, ಸ್ವಾಮಿ ನಿವಾಸ, 1ನೇ ಬ್ಲಾಕ್, ಕಮಠಾಣ, ಬೀದರ್–585226. |
| 2 | ಕೋಲಾರ | ಡಾ॥ ಶ್ರೀರಾಮಯ್ಯ, ನಂ.ಎಫ್–1, ಚಾಬ್ರಿಯ ರೆಸಿಡೆನ್ಸಿ ಕೆ.ಹೆಚ್.ಎಂ. ಬ್ಲಾಕ್, ಆರ್.ಟಿ.ನಗರ, ಬೆಂಗಳೂರು–560032. | ಆರ್.ಪಣೀಂದ್ರ ನಂ.85, 4ನೇ ಅಡ್ಡರಸ್ತೆ, ಜಯರಾಮ ನಿವಾಸ, ವಿನಾಯಕನಗರ, ವಿ.ವಿ.ಎಕ್ಸ್‌ಟೇನ್ಷನ್, ಹೊಸಕೋಟೆ–562114 | -- |
| 3 | ಚಿತ್ರದುರ್ಗ | ಎಂ.ಟಿ.ಶಂಕರಪ್ಪ, ಶ್ರೀ ಗುರುಕೃಪ, ಜೋಗಿಮಟ್ಟಿ ರೋಡ್, 5ನೇ ಕ್ರಾಸ್,ಜ್ಞಾನದೀಪ ಕಾನ್ವೆಂಟ್ ಹತ್ತಿರ ಚಿತ್ರದುರ್ಗ–577501. | ಮಲ್ಲಯ್ಯ.ಟಿ. ಶ್ರೀ ಮೈಲಾರಲಿಂಗೇಶ್ವರ ನಿಲಯ, 3ನೇ ಕ್ರಾಸ್, ಕಾಮನಬಾವಿ ಬಡಾವಣೆ, ಚಿತ್ರದುರ್ಗ–277501. | ಟಿ.ಪಾಂಡ್ಯಪ್ಪ, ಜೋಗಿಮಟ್ಟಿ ರೋಡ್, 4ನೇ ಕ್ರಾಸ್, ಬಿ.ಎಸ್.ಎನ್.ಎಲ್. ಆಫೀಸ್ ಹತ್ತಿರ ಚಿತ್ರದುರ್ಗ. |
| 4 | ಬೆಂಗಳೂರು (ಗ್ರಾ)/(ನಗರ) | ಹೆಚ್.ಸಿ.ಚಿದಾನಂದ, ನಂ.ಡಿ–3, ವಿನಾಯಕ ರೆಸಿಡೆನ್ಸಿ, 5ನೇ ಕ್ರಾಸ್, ಗಣೇಶ ಬ್ಲಾಕ್ ದಿನ್ನೂರು ರೋಡ್, ಆರ್.ಟಿ.ನಗರ ಬೆಂಗಳೂರು –560032. | ಟಿ.ಮಾದೇಗೌಡ, ನಂ.119/4, 3ನೇ ಮುಖ್ಯ ರಸ್ತೆ, ದ್ವಾರಕನಗರ, ಚಂದ್ರ ಲೇಔಟ್, ಬೆಂಗಳೂರು–560072 | ಮುಕುಂದ ರಾವ್ ನಂ.99, 2ನೇ ಮೈನ್ ರೋಡ್, 6ನೇ ಕ್ರಾಸ್, ಬಿಕಾಸಿಪುರ, ಇಸ್ರೋ ಲೇಔಟ್, ಬೆಂಗಳೂರು–560061. |
| 5 | ಹಾಸನ/ಕೊಡಗು | ಡಾ॥ ಹೆಚ್.ಚಂದ್ರಶೇಖರಪ್ಪ, ಶ್ರೀ ಮಲ್ಲಿಕಾರ್ಜುನ ನಿಲಯ, ಶರಾವತಿನಗರ, ಎ.ಬ್ಲಾಕ್, 5ನೇ ಕ್ರಾಸ್, ಶಿವಮೊಗ್ಗ. | ಎಂ.ಟಿ.ಬೋರಯ್ಯ, ನಂ.234, ಅನ್ನಪೂರ್ಣೇಶ್ವರಿನಗರ 2ನೇ ಕ್ರಾಸ್, ಗೋಪಾಲಕೃಷ್ಣ ರೈಸ್‌ಮಿಲ್ ಹಿಂಭಾಗ, ಮಂಡ್ಯ. | ಎಂ.ಎಸ್.ಮಲ್ಲಿಕಾರ್ಜುನಯ್ಯ, ನಂ.154, ಸಂಜನ, 1ನೇ ಮಹಡಿ, 3ನೇ ಮುಖ್ಯ ರಸ್ತೆ, 4ನೇ ಹಂತ, ಟಿ.ಕೆ.ಲೇಔಟ್, ಮೈಸೂರು–11 |

----2

ಆದ್ದರಿಂದ ತಾತ್ಕಾಲಿಕ ಓಂಬುಡ್ಸ್‌ಮನ್ ಆಯ್ಕೆ ಪಟ್ಟಿಯನ್ನು ಸಾರ್ವಜನಿಕರ ಪ್ರತಿಕ್ರಿಯೆ / ಆಕ್ಷೇಪಣೆಗಳಿಗಾಗಿ ಈ ಮೂಲಕ ಪ್ರಕಟಿಸಿದೆ. ಯಾವುದಾದರೂ ಪ್ರತಿಕ್ರಿಯೆ/ ಆಕ್ಷೇಪಣೆಗಳಿದ್ದಲ್ಲಿ ಅವುಗಳನ್ನು ಲಿಖಿತ ರೂಪದಲ್ಲಿ **ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ, 3ನೇ ಹಂತ, 3ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560001.** ಇವರಿಗೆ ನೇರವಾಗಿ **Fax:080-22342163** ಮೂಲಕ ಅಥವಾ **E-mail:karnregs.ombudsman@gmail.com or E-mail:karnregs@gmail.com**ಮೂಲಕ ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ತಲುಪುವಂತೆ ಸಲ್ಲಿಸಬಹುದಾಗಿದೆ.

**(ಉಪೇಂದ್ರ ಪ್ರತಾಪ್ ಸಿಂಗ್)**
**ಆಯುಕ್ತರು ಗ್ರಾಮೀಣಾಭಿವೃದ್ಧಿ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**